**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್ 683/2019**

**ಸಿ ಡಬ್ಲ್ಯೂ - 1**
**ಪಿ ಡಬ್ಲ್ಯೂ - 1**

| | |
|---|---|
| **ಸಾಕ್ಷಿಯ ಹೆಸರು -** | **ಕುಮಾರ ನಾಯಕ** |
| **ತಂದೆಯ ಹೆಸರು -** | **ರೇಖ್ಯಾ ನಾಯಕ** |
| **ವಯಸ್ಸು -** | 40 **ವರ್ಷಗಳು** |
| **ಉದ್ಯೋಗ -** | **ಕೂಲಿ ಕೆಲಸ** |
| **ವಾಸಸ್ಥಳ -** | **ಎಂ ಎಂ ಹಳ್ಳಿ ತಾಂಡಾ, ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 06-02-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ -6 ನನ್ನ ಅಣ್ಣನ ಮಗ. ಚಾಸಾ -7 ನನ್ನ ತಾಯಿ, ಚಾಸಾ -8 ನನ್ನ ದೊಡ್ಡಪ್ಪನ ಮಗ, ಚಾಸಾ -9 ನನ್ನ ಹೆಂಡತಿ, ಚಾಸಾ -10 ನನ್ನ ಚಿಕ್ಕಪ್ಪ, ಚಾಸಾ -11 ನನ್ನ ಚಿಕ್ಕಪ್ಪನ ಮಗ. ಆರೋಪಿತರ ಪರಿಚಯ ಇರುತ್ತದೆ.

ಡಣಾಯನಕೆರೆಯಲ್ಲಿರುವ ಸರ್ವೆ ನಂ. 523 ಡಿ, ವಿಸ್ತೀರ್ಣ 65 ಸೆಂಟ್ಸ ಜಮೀನು ನನ್ನ ತಂದೆಯ ಹೆಸರಿನಲ್ಲಿ ಸರ್ಕಾರ ಮಂಜೂರು ಮಾಡಿತ್ತು. ಸದರಿ ಜಮೀನನ್ನು ಮೊದಲು ನನ್ನ ತಂದೆ ಮತ್ತು ನಂತರದಲ್ಲಿ ನಾನು ಸಾಗುವಳಿ ಮಾಡಿರುತ್ತೇವೆ. ಈ ಪ್ರಕರಣವನ್ನು ಸುಮಾರು 7 ವರ್ಷಗಳ ಹಿಂದೆ ನನ್ನ ವಕೀಲರ ಮೂಲಕ ದಾಖಲು ಮಾಡಿರುತ್ತೇನೆ. ನಾನು 7 ವರ್ಷಗಳ ಹಿಂದೆ ನನ್ನ ಜಮೀನಿನ ಪಹಣಿ ತೆಗೆಸಲು ಹೊಸಪೇಟೆಯ ತಾಲ್ಲುಕು ಕಚೇರಿಗೆ ಬಂದು ಪಹಣಿ ಪಡೆದು ನೋಡಿದಾಗ ಕೇವಲ 15 ಸೆಂಟ್ಸ ಗೆ ಪಹಣಿಯನ್ನು ಕೊಟ್ಟರು. ಉಳಿದ 50 ಸೆಂಟ್ಸ ಜಮೀನಿಗೆ ಸಂಬಂಧಿಸಿ ಬೇರೆ ಪಹಣಿ ಪತ್ರಿಕೆ ಇರುತ್ತದೆ ಎಂದು ಅಲ್ಲಿದ್ದ ಅಧಿಕಾರಿ ನನಗೆ ತಿಳಿಸಿದರು.

ನಾನು ಸದರಿ ಪಹಣಿ ಪತ್ರಿಕೆಯನ್ನು ಸಹ ತೆಗೆದು ನೋಡಿದೆ. ನಮ್ಮ ಜಮೀನಿಗೆ ಸಂಬಂಧಿಸಿ 2 ಪಹಣಿ ಪತ್ರಿಕೆಗಳು ಆಗಿರುವುದು ಕಂಡು ಬಂದಿತ್ತು. ನಾನು ನನ್ನ ವಕೀಲರನ್ನು ಭೇಟಿಯಾಗಿ 2 ಪಹಣಿಗಳು ಬರುತ್ತಿವೆ ಎಂದು ತಿಳಿಸಿದಾಗ ಅವರು ದಾಖಲೆಗಳನ್ನು ತೆಗೆಸಿಕೊಂಡು ಬರುವಂತೆ ತಿಳಿಸಿದ್ದರು. ನಾನು ದಾಖಲೆಗಳನ್ನು ತೆಗೆದುಕೊಂಡು ವಕೀಲರನ್ನು ಭೇಟಿಯಾದಾಗ ನನಗೆ ನನ್ನ ಚಿಕ್ಕಪ್ಪನಾದ ಭೀಮಾ ನಾಯಕ ರವರು ತಾವೇ ನನ್ನ ತಂದೆ ರೇಖ್ಯಾ ನಾಯಕ ಎಂದು ಸುಳ್ಳು ಪ್ರತಿಪಾದಿಸಿ ಅವರಂತೆ ನಟಿಸಿ 15 ಸೆಂಟ್ಸ್ ಜಮೀನನ್ನು 3 ನೇ ಆರೋಪಿ ಅಜೀಜ್ ಹುಲ್ಲಾ ರವರಿಗೆ ಮಾರಾಟ ಮಾಡಿದ್ದು ಗೊತ್ತಾಯಿತು. 1 ಮತ್ತು 2 ನೇ ಆರೋಪಿತರು ಭೀಮಾ ನಾಯಕನ ಮಕ್ಕಳಿದ್ದು, ಸದರಿಯವರಿಗೆ ತಮ್ಮ ತಂದೆ ರೇಖ್ಯಾ ನಾಯಕ ಅಲ್ಲ ಎಂದು ಗೊತ್ತಿದ್ದರೂ ಸಹ ಆತನನ್ನು ನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ರೇಖ್ಯಾ ನಾಯಕ ಎಂದು ಕ್ರಯ ಪತ್ರದಲ್ಲಿ ಬರೆಯಿಸಿ ಆತನನ್ನು ನೋಂದಣಾಧಿಕಾರಿಗಳ ಮುಂದೆ ಕೂರಿಸಿ ತಾವುಗಳು ಆತನನ್ನು ಗುರುತಿಸುವುದಾಗಿ ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಸಹ ಮಾಡಿರುತ್ತಾರೆ.

3 ನೇ ಆರೋಪಿಯ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿಯೇ ಇದ್ದು, ನಾನು ಯಾರು ಮತ್ತು ರೇಖ್ಯಾ ನಾಯಕ ಯಾರು ಎಂದು ಗೊತ್ತಿದ್ದರೂ ಸಹ, ಭೀಮಾ ನಾಯಕ ರೇಖ್ಯಾ ನಾಯಕ ಅಲ್ಲ ಎಂದು ಗೊತ್ತಿದ್ದರೂ ಸಹ, ನನ್ನ ಜಮೀನನ್ನು ಕಬಳಿಸುವ ಉದ್ದೇಶದಿಂದ ಸದರಿ ಕ್ರಯ ಪತ್ರವನ್ನು ಭೀಮಾ ನಾಯಕನಿಂದ ಬರೆಸಿಕೊಂಡಿರುತ್ತಾನೆ. ಭೀಮಾ ನಾಯಕರವರು ಈಗ್ಗೆ 7 ರಿಂದ 9 ವರ್ಷದ ಹಿಂದೆ ಮೃತ ಪಟ್ಟಿರುತ್ತಾರೆ.

**3** ನೇ ಆರೋಪಿ ನನ್ನ ಜಮೀನಿನಲ್ಲಿ ಉಳುಮೆ ಮಾಡಲು ಮುಂದಾದಾಗ ನಾನು ಜಮೀನು ನನ್ನದು ಎಂದು ಆತನನ್ನು ತಡೆದು ನಿಲ್ಲಿಸಿರುತೆತೇನೆ. ಆಗ ಆತ ಜಮೀನನ್ನು ತಾನು ಖರೀದಿಸಿದ್ದಾಗಿ ಹಾಗೂ ತನ್ನ ಹೆಸರಿನಲ್ಲಿ ಪಹಣಿ ಇರುವುದಾಗಿ ನನಗೆ ತಿಳಿಸಿದ್ದ. ಆದ್ದರಿಂದಲೇ ನಾನು ಮೇಲೆ ಹೇಳಿದಂತೆ ತಾಲ್ಲೂಕು ಕಚೇರಿಗೆ ಹೋಗಿ ಪಹಣಿ ಪತ್ರಿಕೆಗಳನ್ನು ತೆಗೆಸಿ ನೋಡಿದ್ದೆ. ದಾಖಲೆಗಳನ್ನೆಲ್ಲಾ ತೆಗೆದು ನೋಡಿದಾಗ **3** ನೇ ಆರೋಪಿಯ ಹೆಸರಿನಲ್ಲಿ ನನ್ನ ಜಮೀನಿನ ಖಾತೆ ಬದಲಾವಣೆ ಆಗಿರುವುದು ಕಂಡು ಬಂದಿತ್ತು. ಆರೋಪಿತರು ಜಮೀನನ್ನು ಲಪಟಾಯಿಸುವ ಉದ್ದೇಶದಿಂದ **2** ನೇ ಆರೋಪಿ ಜಾಣನಿರುವುದರಿಂದ ಆತನ ಮಾತು ಕೇಳಿ ಈ ರೀತಿ ಕ್ರಯ ಪತ್ರವನ್ನು ಭೀಮಾ ನಾಯಕನನ್ನು ಕೂರಿಸಿ **3** ನೇ ಆರೋಪಿಗೆ ಬರೆದುಕೊಟ್ಟಿರುತ್ತಾರೆ.

ಈ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದು ಖಾಸಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು ಗುರುತಿಸಲಾಯಿತು.

ನಾನು ಪೋಲಿಸರು ಬಂದಾಗ ಡಣಾಯನಕೆರೆಯ ಸರ್ವೆ ನಂ. **523** ಡಿ ಜಮಿನಿನಲ್ಲಿನ **15** ಸೆಂಟ್ಸ ಜಾಗವನ್ನು ತೋರಿಸಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ **7** ವರ್ಷದ ಹಿಂದೆ ಚಾಸಾ **-3** ಮತ್ತು ಇನ್ನೊಬ್ಬ ಮುಸ್ಲಿಂ ಸಾಕ್ಷಿದಾರನ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಪಂಚನಾಮೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದಿಃ **27.07.2017** ರ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **2** ಎಂದು ಗುರುತಿಸಲಾಯಿತು.

ಸದರಿ ಪಂಚನಾಮೆ ಆದ **1-2** ತಿಂಗಳ ನಂತರ ಪೋಲಿಸರು ನನ್ನನ್ನು ಹೊಸಪೇಟೆಯ ಹಳೆ ಉಪ ನೋಂದಣಾಧಿಕಾರಿಗಳ ಕಚೇರಿಗೆ ಕರೆಯಿಸಿ ನನ್ನ ಸಮಕ್ಷಮ ಇಬ್ಬರು ಪೋಲಿಸರೇ ಕರೆದುಕೊಂಡು ಬಂದಿದ್ದ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿ ದಿಃ **04.09.2017** ರ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **3** ಎಂದು ಗುರುತಿಸಲಾಯಿತು.

ಸಾಕ್ಷಿ **2** ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಗುರುತಿಸುವಿಕೆಗಾಗಿ ಒಟ್ಟಾಗಿ ನಿಪಿಃ **4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರು ಸಮಯ ಕೋರಿದ್ದು, ನ್ಯಾಯದಾನದ ಹಿತದೃಷ್ಟಿಯಿಂದ ಸಮಯಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.